ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಇದು 10ನೇ ಹಣಕಾಸು ಯೋಜನೆಯಡಿಯಲ್ಲಿ ತೆಗೆದುಕೊಂಡಿರುವಂತಹ ಕೆಲಸ ಈಗಾಗಲೇ ಇದಕ್ಕೆ 3 ಲಕ್ಷದ 25 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಇವರು ಖರ್ಚು ಮಾಡಿಕೊಂಡಿದ್ದಾರೆ. ನಾನು ಮುನಿಸಿಪಾಲಿಟಿಯವರಿಗೆ ಅದನ್ನು ತತ್‌ಕ್ಷಣ ಕ್ರೋಢೀಕರಿಸುವುದಕ್ಕೆ ಡೈರಕ್ಷನ್ ಕೊಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಮೈಸೂರು ನಗರ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು, ಅದರ ಒಂದು ಪ್ರಾದಿಕಾರ ನೂರು ವಸಂತಗಳನ್ನು ದಾಟಿ ನೂರ ಒಂದನೇ ವಸಂತಕ್ಕೆ ಬರುವಂತಹ ಕಾಲ ಸನ್ನಿಹಿತವಾಗುತ್ತಿದೆ. ಅದರಲ್ಲಿರುವಂತಹ 250 ಜನರು ಸಿ ಅಂಡ್ ಆರ್ ರೂಲ್‌ಗೆ ಅಪ್ಲೈ ಮಾಡಿದರೆ, ಅದು ತೀರ್ಮಾನವಾಗದೇ, ಇದು ಬರೀ ಅರಣ್ಯರೋಧನವಾಗಿದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಇದನ್ನು ವಾಲೆಂಟರಿ ರಿಟೈರ್ ಮೆಂಟ್ ವಿಷಯವೆಂದು ತಿಳಿದು ಉತ್ತರವನ್ನು ಓದಗಿಸಲಾಗಿದೆ, ಎಂದು ಹೇಳೀದೆ, ಇದಕ್ಕೆ ನಾನು ಉತ್ತರವನ್ನು ಕೊಡುವುದಿಲ್ಲ, ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಂತ್ರಿಗಳೇ ಇಲ್ಲವಲ್ಲ!

– ಗೊಂದಲ –

ಅಧ್ಯಕ್ಷರು : ಸಂಬಂಧಪಟ್ಟಂಥ ಮಂತ್ರಿಗಳು ಬರುತ್ತಿದ್ದಾರೆ: ಅವರು ಬಂದ ನಂತರ ಉತ್ತರಿಸುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ : ಉಮೇಶ್ ಕತ್ತಿಯವರನ್ನು ಕರೆದಿದ್ದರು, ಅವರು ಬಂದಿರಲಿಲ್ಲ, ನಾನು ಬಂದಿದ್ದೆ, ಹಾಗೆ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ. ತಾವು ಸ್ವಲ್ಪ ಸಹಿಸಿಕೊಳ್ಳುವುದನ್ನು ಕಲಿತುಕೊಳ್ಳಬೇಕು, ಈಗ ಕಲಿಯದೆ ಮತ್ತೆ ಯಾವಾಗ ಕಲಿಯುತ್ತೀರಿ?

ಕೊಳಚೆ ಪ್ರದೇಶಗಳಲ್ಲಿ ಬಾಂಗ್ಲಾ ದೇಶೀಯರ ಸೇರ್ಪಡೆ

591 (5112) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳ ಮಧ್ಯೆ ಕೆಲವು ವಿದೇಶಿ ನಾಗರೀಕರು ಇರುವುದು ಸರ್ಕಾರಕ್ಕೆ ವರದಿ ಬಂದಿದೆಯೆ;

2) ಬಂದಿದ್ದಲ್ಲಿ ಇದಕ್ಕೆ ಕಾರಣರಾರು? ಇಂತಹ ಬಾಂಗ್ಲಾ ದೇಶಿಯರನ್ನು ಗುರುತಿಸಿ ಪತ್ತೆ ಮಾಡಲಾಗಿದೆಯೇ. ಅವರೆಲ್ಲಾ ಅಕ್ರಮವಾಗಿ ರಾಜ್ಯಕ್ಕೆ ಹೇಗೆ ನುಸುಳಿದರು.

3) ಇತ್ತೀಚೆಗೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಲಗ್ಗೆರೆಗೆ ಸ್ಥಳಾಂತರಿಸಿದ ವಸಂತನಗರ ಕೊಳಚೆ ಪ್ರದೇಶದ ನಿವಾಸಿಗಳಲ್ಲಿ ಬಾಂಗ್ಲಾ ದೇಶಿಯರು ಇದ್ದುದು ನಿಜವೇ; ಇದು ಹೇಗೆ ಬೆಳಕಿಗೆ ಬಂದಿದೆ.

4) ಅಕ್ರಮವಾಗಿ ನುಸುಳಿದ ಬಾಂಗ್ಲಾ ದೇಶಿಯರಿಗೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಿಸಿದ ಮನೆಗಳನ್ನು ವಿತರಿಸಿ ಹಂಚಿಕೆ ಮಾಡಲಾಗಿದೆಯೇ.

5) ಇವರು ಬಾಂಗ್ಲಾ ದೇಶಿಯ ಪ್ರಜೆಗಳಾಗಿದ್ದಲ್ಲಿ ಭಾರತೀಯ ದಾಖಲೆಗಳನ್ನು ಹೇಗೆ ಪಡೆದರು; ಇದರಲ್ಲಿ ಯಾರ ಕೈವಾಡ ಇದೆ ಎಂದು ಶಂಕಿಸಲಾಗಿದೆ;

6) ಈ ವಿಷಯದಲ್ಲಿ ತನಿಖೆ ಕಾರ್ಯವನ್ನು ಕೈಗೊಳ್ಳಲಾಗಿದೆಯೇ, ತಪ್ಪಿತಸ್ಥರು ಯಾರು ಎಂದು ಗುರುತಿಸಲಾಗಿದೆಯೇ;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

1) ಇಲ್ಲ.
2) ಉದ್ಭವಿಸುವುದಿಲ್ಲ.
3) ಇಲ್ಲ
4) ಉದ್ಭವಿಸುವುದಿಲ್ಲ
5) ಉದ್ಭವಿಸುವುದಿಲ್ಲ
6) ಉದ್ಭವಿಸುವುದಿಲ್ಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಇಲ್ಲ, ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನನ್ನ ಉಪ ಪ್ರಶ್ನೆ ಏನೆಂದರೆ, ಆ ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷರು ಮತ್ತು ವಸತಿ ಸಚಿವರಾದ ಶ್ರೀ ಸಿ.ಆರ್. ಸಗೀರ್ ಅಹಮದ್ ರವರು ಇಬ್ಬರೂ ಕೂಡ ವಸಂತನಗರದ ಕೊಳಚೆ ಪ್ರದೇಶ ಲಗ್ಗೇರೆಗೇ ಏನು ಸ್ಥಳಾಂತರವಾಗಿದೆ ಇಲ್ಲಿ ಬಾಂಗ್ಲದೇಶೀಯರಿದ್ದಾರೆನ್ನುವ ಅಭಿಪ್ರಾಯವನ್ನು ವ್ಯಕ್ತಿಪಡಿಸಿದ್ದಾರೆ, ಮಾನ್ಯ ವಸತಿ ಸಚಿವರು ಈ ಬಗ್ಗೆ ನಾನು ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಬೇರೆ ಬೇರೆ ಪತ್ರಿಕೆಗಳಲ್ಲೂ ಕೂಡ ಈ ರೀತಿ ಬಾಂಗ್ಲಾದೇಶೀಯರು ಕರ್ನಾಟಕದ ಬೇರೆ ಬೇರೆ ಕೊಳಚೆ ಪ್ರದೇಶಗಳಲ್ಲಿ ಹಾಗೂ ಕೊಳಚೆಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಅವರು ಇದ್ದಾರೆನ್ನುವ ವರದಿಗಳು ಸಾಕಷ್ಟು ಬರುತ್ತಿವೆ. ಈ ಕುರಿತು ಸರ್ಕಾರ ಸಮಗ್ರವಾಗಿ ತನಿಖೆ ಮಾಡಿಸುವುದಕ್ಕೆ ಯಾವ ರೀತಿ ಯೋಚಿಸುತ್ತದೆ, ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಹೇಳಬೇಕು. ಇಲ್ಲವೆಂದರೆ ಏನಾಗುತ್ತದೆಂದರೆ, ನಾವು ಇವತ್ತಿನ ದಿವಸ ಪಶ್ಚಿಮ ಬಂಗಾಳ ಮತ್ತು ಪೂರ್ವಾಂಚಲ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ವಲಸೆ ಬರುತ್ತಿದ್ದಾರೆಂದು ಸುದ್ದಿಯನ್ನು ಕೇಳುತ್ತಿದ್ದೇವೆ, ಆ ರೀತಿ ನಮ್ಮ ರಾಜ್ಯವು ಆಗಬಾರದು, ಆದುದರಿಂದ ಈ ಬಗ್ಗೆ ಸರ್ಕಾರ ಸಮಗ್ರ ತನಿಖೆ ಮಾಡಿಸಿ ಸತ್ಯಸಂಗತಿಯನ್ನು ಹೇಗೆ ಬಯಲಿಗೆಳೆಯುತ್ತದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಈ ಫಾರಿನರ್ಸ್ ಆಕ್ಟ್ ಅನ್ನು ಜಾರಿ ಮಾಡುವುದು ಕೇಂದ್ರ ಸರ್ಕಾರದ ಕೆಲಸ; ಮತ್ತು ಬಂಗ್ಲಾದೇಶದಿಂದ ಭಾರತಕ್ಕೆ ಯಾರು ಬರುತ್ತಾರೆ, ಅವರನ್ನು ಗಡಿಯಲ್ಲಿ ತಡೆಯುವುದು ಅಥವಾ ಅವರನ್ನು ಅಲ್ಲಿಯೇ ಚೆಕ್ ಮಾಡಿ ಪುನಃ ವಾಪಸ್ ಕಳುಹಿಸುವುದು ಭಾರತ ಸರ್ಕಾರದ ಕೆಲಸ. ಆದರೆ ಇಲ್ಲಿ ಯಾರಾದರೂ ಅಪ್ಪಿತಪ್ಪಿ ಬಂದಿದ್ದರೆ, ಅಂತಹವರು ಇಲ್ಲಿಯ ಕಮಿಷನರ್ ಕಛೇರಿಯಲ್ಲಿ ಮಾಹಿತಿಯನ್ನು ಕೊಡಬಹುದು, ಇಲ್ಲವೆಂದರೆ ಯಾವುದಾದರೂ ಜಿಲ್ಲೆಯಲ್ಲಿದ್ದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅಥವಾ ನಮ್ಮ ಎಸ್‌ಪಿ ಕಛೇರಿಯಲ್ಲಿ ನಾವು ಇಂತಹ ದೇಶದಿಂದ ಬಂದಿದ್ದೇವೆಂದು ಅವರು ತಮ್ಮ ಹೆಸರನ್ನು ರಿಜಿಸ್ಟರ್‌ನಲ್ಲಿ ನಮೂದಿಸಬೇಕು. ಇಂತಹ ಯಾವ ಮಾಹಿತಿಯೂ ಕೂಡ ನಮ್ಮಲ್ಲಿ ಬೆಂಗಳೂರಿನ ಬಗ್ಗೆ ಇಲ್ಲ. ಆದರೆ ತಾವು. ಕೆಲವರು ಕೊಳಚೆ ಪ್ರದೇಶದಲ್ಲಿದ್ದಾರೆನ್ನುವ ವಿಚಾರವನ್ನು

ಹೇಳಿದಿರಿ. ಆದರೆ ನಮಗೆ ಬಂದಿರುವ ಮಾಹಿತಿಯ ಪ್ರಕಾರ ಕೊಳಚೆ ಪ್ರದೇಶದಲ್ಲಿ, ಕರ್ನಾಟಕ ರಾಜ್ಯಕ್ಕೆ ಸೇರಿದವರು, 222 ಜನ. ಆಂಧ್ರಪ್ರದೇಶಕ್ಕೆ ಸೇರಿದವರು, 26 ಜನ ತಮಿಳುನಾಡಿಗೆ ಸೇರಿದವರು, 23 ಜನ ರಾಜಸ್ಥಾನಕ್ಕೆ ಸೇರಿದವರು, 16 ಜನ ಬಿಹಾರಕ್ಕೆ ಸೇರಿದವರು, 3 ಜನ ಮಹಾರಾಷ್ಟ್ರಕ್ಕೆ ಸೇರಿದವರು, ಒಬ್ಬರು ಮತ್ತೆ 28 ಜನ ಮನೆಗೆ ಬೀಗ ಹಾಕಿ ವ್ಯಾಪಾರಕ್ಕೆ ಹೋದಂತಹವರಿದ್ದಾರೆ. ಇವರಲ್ಲಿ ಜಂಗಮರು 7 ಜನರು, ಮುಸ್ಲಿಮರು 13 ಜನ, ಕ್ರಿಶ್ಚನ್ನರು 5 ಜನ, ಇಬ್ಬರು ಎಸ್‌ಸಿ, ಒಬ್ಬರು ಎಸ್‌ಟಿ ಹೀಗೆ 28 ಜನ ಸಣ್ಣಪುಟ್ಟ ವ್ಯಾಪಾರಕ್ಕಾಗಿ ಹೋಗಿದ್ದಾರೆನ್ನುವುದು ಸರ್ವೆ ವರದಿಯಿಂದ ನಮಗೆ ಗೊತ್ತಾಗಿದೆ. ತಾವೇನು ಹೇಳುತ್ತಿದ್ದೀರೆಂದರೆ, ಹಿಂದೆ ಶ್ರೀ ಸಗೀರ್ ಅಹಮದ್‌ರವರು ಮತ್ತು ಕೊಳಚೆ ನಿರ್ಮೂಲನ ಮಂಡಳಿಯ ಅಧ್ಯಕ್ಷರು ಅಲ್ಲಿ ಕೆಲವು ಬಾಂಗ್ಲದೇಶೀಯರಿದ್ದಾರೆನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ ನಾನು ಇನ್ನೊಮ್ಮೆ ಅಲ್ಲಿ ಇರತಕ್ಕಂಥ ಸುಮಾರು 319 ಮನೆಗಳೇನಿವೆ ಆ ಬಗ್ಗೆ ರೀಸರ್ವೆ ಮಾಡಿಸುತ್ತೇನೆ. ಈಗ ವಸಂತ ನಗರದಲ್ಲಿ ಕೊಳಚೆ ಪ್ರದೇಶವಿಲ್ಲ, ಪೂರ್ಣ ವರ್ಗಾಯಿಸಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ವಿದೇಶೀಯರು ಅಕ್ರಮವಾಗಿ ವಲಸೆ ಬಂದು ನಮ್ಮ ರಾಜ್ಯ ಅಥವಾ ದೇಶದಲ್ಲಿದ್ದು ಸಮಾಜ ಹಾಗೂ ರಾಷ್ಟ್ರದ್ರೋಹಿ ಚಟುವಟಿಕೆಗಳನ್ನು ನಡೆಸುತ್ತಿರತಕ್ಕಂಥದ್ದು ನಮಗೆ ಅನೇಕ ಕಡೆಗಳಲ್ಲಿ ಕಂಡುಬಂದಿದೆ. ರಾಜ್ಯ ಸರ್ಕಾರ ಈ ಕುರಿತು ಕೇವಲ ಕೊಳಚೆ ಪ್ರದೇಶಗಳಲ್ಲಿ ಮಾತ್ರವಲ್ಲದೆ, ರಾಜ್ಯದ ಉಳಿದ ಭಾಗಗಳಲ್ಲೂ ಕೂಡ ಪರಿಶೀಲಿಸಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಎಲ್ಲಿ ಈ ರೀತಿ ಅಕ್ರಮವಾಗಿ ವಲಸೆ ಬಂದು ಇದ್ದಾರೆ ಎನ್ನುವುದು ಸರ್ವೇಕ್ಷಣೆಯಿಂದಲೇ ಗೊತ್ತಾಗುತ್ತದೆ. ಇದರಲ್ಲಿ ರಾಷ್ಟ್ರ ಹಿತ ಇರುವುದರಿಂದ, ಹೀಗೆ ಅಕ್ರಮವಾಗಿ ವಲಸೆ ಬಂದವರನ್ನು ಹೊರಹಾಕುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುವುದರಿಂದ ಇದಕ್ಕೇನಾದರೂ ವಿಶೇಷವಾದ ಜಾಗೃತ ದಳವನ್ನು ರಚನೆ ಮಾಡಿ ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಂದ್ರ ಸರ್ಕಾರದವರಿಗೆ ಗೊತ್ತಿಲ್ಲದಂತೆ ದೇಶಕ್ಕೆ ಬರಲು ಆಗುವುದಿಲ್ಲವಲ್ಲಾ, ಗಡಿಯಲ್ಲಿ ಯಾರೇ ಬರಬೇಕಾದರೂ, ಅದು ಪಂಜಾಬ್ ಗಡಿಯಿರಬಹುದು, ಚೈನಾ ಗಡಿಯಿರಬಹುದು, ನೇಪಾಳ ಗಡಿ ಇರಬಹುದು, ಎಲ್ಲಿಂದಾದರೂ ಅವರು ಬರಬೇಕಾದರೆ, ಅಥವಾ ನುಸುಳಿ ಬರಬೇಕಾದರೆ ಆ ಗಡಿಯಿಂದಲೇ ಬರಬೇಕು ಅಪ್ಪಿ ತಪ್ಪಿ ಯಾರಾದರೂ ಬಂದಿದ್ದರೆ, ನಾನು ಈಗಾಗಲೇ ಹೇಳಿದಂತೆ ನಾವು ನಿಗಾ ಇಟ್ಟು ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ. ನೀವು ಕೊಳಚೆ ಪ್ರದೇಶದಲ್ಲಿ ಹೀಗಿದ್ದಾರೆ ಎಂದು ಪ್ರಶ್ನೆ ಕೇಳಿದಿರಿ, ನಾವು ಆ ಬಗ್ಗೆ ಉತ್ತರವನ್ನು ಒದಗಿಸಿದ್ದೇವೆ.

ಅಧ್ಯಕ್ಷರು : ಮಾನ್ಯ ಶಿವಾನಂದ ಪಾಟೀಲರು ಬಂದಿರುವುದಿಲ್ಲ, ಮಾನ್ಯ ಅಶೋಕ್‌ರವರು ಮುಂದಿನ ಪ್ರಶ್ನೆ ಕೇಳುವುದು.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಿ.ಎ. ಮತ್ತು ಪಾರ್ಕ್‌ಗಳನ್ನು ನಿವೇಶನಗಳನ್ನಾಗಿ ಪರಿವರ್ತನೆ ಮಾಡಿರುವ ಬಗ್ಗೆ

593 (5084) : ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?